ಹಣ್ಣಾಗಯಿನೀರ್ಗಾಯಿ ಮಾಡಿದ್ದವು. ಒಂದು ಪಕ್ಷ ಅವರೇ ಏನಾದರೂ ಮಗಳನ್ನು ಕಿಡ್ನಾಪ್ ಮಾಡಿದ್ದರೆ ಇಲ್ಲಾ ಮತ್ತಿನ್ನೇನನ್ನಾದರೂ ಮಾಡಿಬಿಟ್ಟಿದ್ದರೆ! ಅರೆ ಅಲ್ಲಾ ಅಂತ ಖಾಸಿಂ ಸಾಬರು ಆ ಅಪರ ಹೊತ್ತಿನಲ್ಲಿ ಹತ್ತಿಕ್ಕಿಕೊಳ್ಳಲಾಗದ ಆತಂಕವನ್ನು ಅಡವಪ್ಪನೆದುರು ತೋಡಿಕೊಂಡರೆ ಅವನೇ ಏನಾದರೊಂದು ದಿಕ್ಕು ತೋರಿಸಿಯಾನು ಅಂತ ಅನುಕಂಡು ಅಡವಪ್ಪನ ತೋಟದ ಮನೆಯ ದಾರಿ ಹಿಡಿದಿದ್ದರು. ಆದರಲ್ಲಿ ಅಡವಪ್ಪನ ಮನೆಗೆ ಬೀಗ ಬಿದ್ದದ್ದರಿಂದ ತನ್ನ ನಸೀಬನ್ನು ಹಳಿದುಕೊಂಡು ಜಗಲಿಯಲ್ಲಿ ಮಲಗಿದ್ದವನನ್ನು ಮಾತಾಡಿಸುವ ಗೋಜಿಗೂ ಹೋಗದೆ ಮುಂದೇನು ಮಾಡಬೇಕೆಂದು ತೋಚದೆ ತಿರುಗಿ ಹೋಗುತ್ತಿದ್ದರು.

## 5

ಅಗಾಧ ಮೌನದಿಂದಲೂ ಅಪರಿಮಿತ ಗಾಂಭೀರ್ಯದಿಂದಲೂ ಹೊನ್ನಟ್ಟಾಲಯ್ಯನೊಂದಿಗೆ ಮನೆಯತ್ತ ಕಾಲಾಕುತ್ತಿದ್ದ ಅಡವಪ್ಪನೊಳಗೆ ಖಾಸಿಂ ಸಾಬರು ತಿರುತಿರುಗಿ ಎದ್ದು ಕೂರುತ್ತಾ ಅಸಾಧ್ಯ ಕೋಪದ ಕುದಿಗೆ ಅಡವಪ್ಪನ ಕೆಂಪು ಮೂತಿಗೆ ಮತ್ತಷ್ಟು ಕೆಂಪು ಕೂಡಿಕೊಂಡು ಮೈಯ್ಯ ರಕುತವೆಲ್ಲಾ ಮುಖದೊಳಗಿಂದ ಸೋರೋಗಿ ಬಿಡುತ್ತೇನೋ ಎಂಬಂತೆ ಭಾಸವಾಗುತ್ತಿತ್ತು. 'ಎಲಾ ತುರುಕ್ನನ್ಮಗ್ನೆ ನನ್ ಬುಡ್ಕೇ ಕೊಳ್ಳಿ ಇಕ್ಬುಟ್ನಲ್ಲ! ಅದೆಂಗ್ ಬದುಕ್ತೀಯಾ ಈ ಊರ್ನಾಗೆ ನಾನೂ ಕಂಡ್ಮುಗೀತೀನಿ,' ಅನ್ನುವ ಮಾತುಗಳೊಂದಿಗೆ ಕಟಗುಟ್ಟಿದ ಹಲ್ಲುಗಳ ಸದ್ದಿಗೆ ತಿರುಗಿ ನೋಡಿದ ಹೊನ್ನಟ್ಟಾಲಯ್ಯ ಅಡವಪ್ಪನ ಮುಖಾವತಾರಕ್ಕೆ ಬೆಚ್ಚಿದ. 'ಓಚಯ್ಯ ಓದ್ನೋ ಚಾಕ್ರಿ ಬುಟ್ಟುವಾಲ್ಗಾ ಊದ್ನಾಕೆ ನಿಂತ್ಕಂಡವ್ನೆ, ಯಾವ್ ಗ್ರಾಚಾರ್ಕೋ ಏನೋ ಎಲ್ಲಿಂದ ಬಂದ್ನೋ ಆ ಅಡ್ನಾಡಿ ನನ್ಮಗ ಇಲ್ಲಿ ವರ್ಸೆ ತೋರ್ಸಾಕೆ ಸುರು ಹಚ್ಕಂಡವ್ನೆ, ಒಂದಿನ ಕತ್ರುಸ ಬುಡ್ಮುಟ್ಟ ಮಕಾಣಕ್ಕೆ ಇಂಗಾಡ್ತಾವ್ನೆ. ಅವ್ನೇನೋ ಅಲಾಲ್ಟೋರ ಅಂತಿಟ್ಕಣಾನ ಇವ್ನು ಏನ್ ಸಗ್ಣಿ ತುಂಬ್ಕೆಂಡವ್ನ ತಲೇಲಿ,' ತನ್ನ ಮಾತುಗಳಿಂದ ರವೋಟು ಗೆಲುವಾದಾನೆಂಬ ಆಸೆಯಿಂದ ಅಂದ ಹೊನ್ನಟ್ಟಾಲಯ್ಯ. ಇವಾವನ್ನೂ ಕಿವಿಗಾಕಿಕೊಳ್ಳದ ಅಡವಪ್ಪನ ಮನಸು ಖಾಸಿಂ ಸಾಬರನ್ನೇ ಧೇನಿಸುತ್ತಾ ಕುದಿಯುತ್ತಿತ್ತು.

ಇಡೀ ಹಳ್ಳಿಗೆ ಸಾಬರ ಮನೆ ಅಂತ ಇದ್ದದ್ದು ಖಾಸಿಂ ಮನೆ ಮಾತ್ರ. ಅವರ ತಾತ ಮುತ್ತಾತನ ಕಾಲದಲ್ಲಿ ವಿಜಯನಗರದ ರಕ್ಕಸ ತಂಗಡಿ ಯುದ್ಧಾನಂತರ ಅವರ ಹಿರೀಕರು ಅಲ್ಲಿಗೆ ಬಂದು ನೆಲಸಿದ್ದರು ಅಂತ ಖಾಸಿಂ ಸಾಬರಿಗೆ ಕೇಳಿ ಗೊತ್ತಿತ್ತು. ಆ ಲಾಗಾಯ್ತಿನಿಂದ ಅವರ ಕುಟುಂಬ ಎತ್ತುಗಳಿಗೆ ಲಾಳ ಕಟ್ಟುವ ಕಸುಬನ್ನೇ ನಂಬಿ ಬದುಕಿತ್ತು. ಊರವರ ಬಾಯಲ್ಲಿ ಅವರ ಮನೆಗೆ ಲಾಳ ಕಟ್ಟುವ ಸಾಬರ ಮನೆ ಅಂತಾನೇ ಆಗಿತ್ತು. ಹಂಗಾಗಿ ಖಾಸಿಂ ಸಾಬರು ಲಾಳದ ಸಾಬರಾಗಿದ್ದರು. ಯಾವಾಗ ದನಕರುಗಳು ಸಂಖ್ಯೆ ಕಡಿಮೆಯಾಗುತ್ತಾ ಹೋಯ್ತೋ ಖಾಸಿಂ ಸಾಬರ ಕಸುಬಿಗೂ ಕತ್ತರಿ ಬಿದ್ದಿತ್ತು. ಅಲ್ಲೊಂದು ಇಲ್ಲೊಂದು ಆಗೊಂದು ಈಗೊಂದು ಸಿಗುವ ಲಾಳ ಕಟ್ಟುವ ಕೆಲಸದಿಂದ ಬದುಕು ನಡೆಸುವುದು ದುರ್ಲಭವಾಗತೊಡಗಿತ್ತು. ನಂತರ ಖಾಸಿಂ ಸಾಬರು ಲಾಳ ಕಟ್ಟುವುದನ್ನು ಒತ್ತಟ್ಟಿಗಿಟ್ಟುಕೊಂಡು ಊರೂರ ಮೇಲೆ ಹೋಗಿ ಕಲಾಯಿ ಕೆಲಸ ಮಾಡತೊಡಗಿದ್ದರು. ಒಮ್ಮೆ ಕಲಾಯಿ ಮಾಡಿಸಿದವರು ಮತ್ತೆ ಇನ್ನೆಂದೋ ಮತ್ತದರ ತಂಟೆಗೆ ಹೋಗುತ್ತಿದ್ದುದರಿಂದ ಅದೂ ಕುಂಟುತ್ತಾ ಸಾಗುವುದ ಕಂಡು ಅದನ್ನು ಮಾಡುತ್ತಲೇ ಸಾಟಿಬುಗುರಿ ಮಾಡಿಸುತ್ತಿದ್ದರು. ಅದಕ್ಕಾಗಿ ಸುತ್ತಮುತ್ತಲೂ ನಡೆಯುತ್ತಿದ್ದ ದನಗಳ ಸಂತೆ ಮತ್ತು ಜಾತ್ರೆಗಳಲ್ಲಿ ಅಡ್ಡಾಡುತ್ತಾ ಹೆಂಗೋ ಹಂಗೆ ಸಂಸಾರ ನಿಭಾಯಿಸುತ್ತಿದ್ದರು.

ತಮ್ಮ ಮೂರು ಜನ ಹೆಣ್ಣು ಮಕ್ಕಳಲ್ಲಿ ಮುಬೀನಾ ಹೈಸ್ಕೂಲು ಮುಗಿಸುತ್ತಿದ್ದಂತೆ ಕಾಲೇಜಿಗೆಂದು ಪಟ್ಟಣಕ್ಕೆ ಸೇರಿಸಿ ಅಲ್ಲಿಯೇ ಹಾಸ್ಟೆಲೊಂದಕ್ಕೆ ಹಾಕಿದ್ದರು. ಅಡವಪ್ಪನ ಮಗ ಶಂಭುಲಿಂಗನೂ ಅದೇ